# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ದಿನಾಂಕ: 9-12-2013 ರಿಂದ 13-12-2013 ರವರೆಗೆ ಮಾರುಕಟ್ಟೆ ಸ್ಥಾಯಿ ಸಮಿತಿಯಲ್ಲಿ ನಡೆದ ಸಭೆಯ ನಡವಳಿಗಳು**

| ಹಾಜರಿದ್ದ ಸದಸ್ಯರುಗಳು ಶ್ರೀಯುತರುಗಳಾದ : | | ಹಾಜರಿದ್ದ ಅಧಿಕಾರಿಗಳು : |
|---|---|---|
| ವೈ.ಆರ್. ಗೌರಮ್ಮ | ಅಧ್ಯಕ್ಷರು | ಉಪ ಆಯುಕ್ತರು(ಮಾರುಕಟ್ಟೆ) |
| ಬಿ.ಆರ್. ನಂಜುಂಡಪ್ಪ | ಸದಸ್ಯರು | ಅಧಿಕ ಕೌನ್ಸಿಲ್ ಕಾರ್ಯದರ್ಶಿ |
| ವಿಜಯ.ಎ | ಸದಸ್ಯರು | ಉಪ ಆಯುಕ್ತರು(ದಾಸರಹಳ್ಳಿ) |
| ಗೀತಾ ಶ್ರೀನಿವಾಸರೆಡ್ಡಿ | ಸದಸ್ಯರು | ಉಪ ಆಯುಕ್ತರು(ಬೊಮ್ಮನಹಳ್ಳಿ) |
| ಸಿದ್ದಲಿಂಗಯ್ಯ | ಸದಸ್ಯರು | ಕಾರ್ಯಪಾಲಕ ಅಭಿಯಂತರರು(ಮಾರುಕಟ್ಟೆ) |
| ಎಲ್. ಶ್ರೀನಿವಾಸ್ | ಸದಸ್ಯರು | ಉಪ ಕಾನೂನು ಅಧಿಕಾರಿ |
| ಲತಾ. ಕೆ | ಸದಸ್ಯರು | ಕಿರಿಯ ಕಾನೂನು ಅಧಿಕಾರಿಗಳು |
| ಎಸ್. ಕ್ರಿಯಾ ಶೈಲಜ | ಸದಸ್ಯರು | ಕಂದಾಯ ಅಧಿಕಾರಿ(ಮಾರುಕಟ್ಟೆ) |
| ಎನ್. ಪಿಳ್ಳಪ್ಪ | ಸದಸ್ಯರು | ಕಂದಾಯ ಅಧಿಕಾರಿ(ಯಲಹಂಕ) |
| ಮುನಿಸಂಜೀವಯ್ಯ | ಸದಸ್ಯರು | ಸ.ಕಾ.ನಿ.ಅ (ಮಾರುಕಟ್ಟೆ) |
| ಕ್ವೀನ್ ಎಲಿಜಿಬತ್ | ಸದಸ್ಯರು | ಸಹ ಕಂದಾಯ ಅಧಿಕಾರಿ(ಪೂರ್ವ-ಮಾರುಕಟ್ಟೆ) |
| | | ಸಹ ಕಂದಾಯ ಅಧಿಕಾರಿ(ಪಶ್ಚಿಮ-ಮಾರುಕಟ್ಟೆ) |
| | | ಸಹ ಕಂದಾಯ ಅಧಿಕಾರಿ(ದಕ್ಷಿಣ-ಮಾರುಕಟ್ಟೆ) |
| | | ಸಹ ಕಂದಾಯ ಅಧಿಕಾರಿ(ಯಲಹಂಕ-ಹಳೆಟೌನ್) |
| | | ಸಹ ಕಂದಾಯ ಅಧಿಕಾರಿ(ಕೆ.ಆರ್.ಪುರ) |
| | | ಸಾರ್ವಜನಿಕ ಸಂಪರ್ಕಾಧಿಕಾರಿ |

*****

**ದಿನಾಂಕ: 9-12-2013 : ಪೂರ್ವ ವಲಯ**

ಪಾಲಿಕೆಯ ಪೂರ್ವ ವಲಯ ವ್ಯಾಪ್ತಿಗೆ ಬರುವ ಪಾಲಿಕೆಯ ಮಾರುಕಟ್ಟೆಗಳಲ್ಲಿರುವ ಮಳಿಗೆಗಳ ಬಗ್ಗೆ ಅಧಿಕಾರಿಗಳು ಒದಗಿಸಿದ ಮಾಹಿತಿಗಳ ಮೇರೆಗೆ ಚರ್ಚೆಯಲ್ಲಿ ವಿವರವಾಗಿ ಪರಿಶೀಲಿಸಲಾಯಿತು. ಪಾಲಿಕೆಯ ಪ್ರತಿಷ್ಠಿತ ಕಟ್ಟಡವಾದ ನೇತಾಜಿ ಸುಭಾಷ್‌ಚಂದ್ರಭೋಸ್, (ಪಿ.ಯು.ಬಿ) ಕಟ್ಟಡದಲ್ಲಿ ಹಂಚಿಕೆದಾರರು ಮಳಿಗೆಗಳಿಗೆ ನಿಗಧಿಪಡಿಸಿರುವ ಪರವಾನಗಿ ಶುಲ್ಕವನ್ನು ಸರಿಯಾಗಿ ಪಾವತಿಸುತ್ತಿಸುತ್ತಿದ್ದಾರೆಯೇ ಎಂಬುದನ್ನು ಪಟ್ಟಿಯಲ್ಲಿ ಪರಿಶೀಲಿಸಲಾಗಿ, ಹಂಚಿಕೆದಾರರು ಪರಿಷ್ಕೃತ ಪರವಾನಗಿ ಶುಲ್ಕವನ್ನು ಪಾವತಿಸದೇ ಹಳೆ ದರದಲ್ಲಿ ಪಾವತಿಸುತ್ತಿರುವುದನ್ನು ಗಮನಿಸಲಾಯಿತು. ಈ ಸಂಬಂಧ ಉಪ ಆಯುಕ್ತರು(ಮಾರುಕಟ್ಟೆ) ರವರನ್ನು ಪ್ರಶ್ನಿಸಲಾಯಿತು. ಪಿ.ಯು.ಬಿ. ಬಿಲ್ಡಿಂಗ್‌ನಲ್ಲಿ ಮಳಿಗೆಗಳನ್ನು 1978ರಲ್ಲಿ ಹಂಚಿಕೆ ಮಾಡಲಾಗಿದ್ದು, 1992ರಲ್ಲಿ ಪರಿಷ್ಕರಣೆ ಆಗಿದ್ದು, ನಂತರ 2008 ರಲ್ಲಿ ಮಳಿಗೆಗಳ ಪರವಾನಗಿ ಶುಲ್ಕವನ್ನು ಮಾನ್ಯ ಆಡಳಿತಗಾರರ ನಿರ್ಣಯದಂತೆ ಈ ಹಿಂದೆ ಪರಿಷ್ಕರಿಸಲಾಗಿದ್ದು, ಸದರಿ ಪರಿಷ್ಕರಣೆ ವಿರುದ್ಧ ಹಂಚಿಕೆದಾರರು ಪರವಾನಗಿ ಶುಲ್ಕವನ್ನು ಕಡಿಮೆ ಮಾಡಿ, ನಿಗದಿಪಡಿಸಲು ಕೋರಿ ಮೇಲ್ಮನವಿ ಸಲ್ಲಿಸಿದ್ದ ಮೇರೆಗೆ ಅಪೀಲು ಸ್ಥಾಯಿ ಸಮಿತಿಯಲ್ಲಿ ಕಡಿಮೆ ಮಾಡಿ, ತೆಗೆದುಕೊಂಡಿದ್ದ ತೀರ್ಮಾನವು ಪಾಲಿಕೆಗೆ ಆರ್ಥಿಕ ನಷ್ಟವಾಗುವುದೆಂದು ಘನ ಸರ್ಕಾರಕ್ಕೆ ಆಯುಕ್ತರು ಪತ್ರ ಬರೆದ ಹಿನ್ನೆಲೆಯಲ್ಲಿ ಸರ್ಕಾರವು ಅಪೀಲು ಸ್ಥಾಯಿ ಸಮಿತಿಯ ತೀರ್ಮಾನವನ್ನು ರದ್ದುಪಡಿಸಲಾಗಿದ್ದು, ಸದರಿ ಆದೇಶವನ್ನು

. . . .2

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯಲ್ಲಿಯೂ ದಾಖಲಿಸಿಕೊಂಡಿದ್ದು, ಪರಿಷ್ಕೃತ ದರದಂತೆ ಬಾಕಿ ಉಳಿಸಿಕೊಂಡಿರುವ ಮೊತ್ತವನ್ನು ಕೂಡಲೇ ಪಾವತಿಸುವಂತೆ ನೋಟೀಸ್ ಜಾರಿ ಮಾಡಲು ಕ್ರಮಕೈಗೊಳ್ಳುವುದಾಗಿ ತಿಳಿಸಿದರು. ಸದರಿ
ಕಟ್ಟಡದಲ್ಲಿರುವ ಮಳಿಗೆಗಳಲ್ಲಿ ವ್ಯಾಪಾರವು ಉತ್ತಮವಾಗಿ ನಡೆಯುತ್ತಿದ್ದು, ಬಾಕಿ ಪಾವತಿಸುವಂತೆ ಸರಿಯಾದ ಲೆಕ್ಕಾಚಾರ ಮಾಡಿ, ನೋಟೀಸ್‌ಗಳನ್ನು ಮೂರು ದಿನಗಳೊಳಗಾಗಿ ಜಾರಿಗೊಳಿಸಿ, ನಿಗಧಿತ ದಿನಾಂಕದೊಳಗೆ ಪಾವತಿಸದ್ದಿದ್ದಲ್ಲಿ ಕಾನೂನು ರೀತ್ಯಾ ಕ್ರಮ ಜರುಗಿಸಲು ಸಮಿತಿಯು ಸೂಚಿಸಿತು.

ಸದರಿ ಕಟ್ಟಡದಲ್ಲಿರುವ ಮಳಿಗೆಗಳಿಗೆ, 1975-76ನೇ ಇಸವಿಯಲ್ಲಿ ಹಂಚಿಕೆಯಾದಗಿನಿಂದ ಕೇವಲ 2 ಬಾರಿ ಪರವಾನಗಿ ಶುಲ್ಕವನ್ನು ಪರಿಷ್ಕರಿಸಿದ್ದು, ಇದುವರೆವಿಗೂ ಮಳಿಗೆಗಳ ಕರಾರುಪತ್ರದ ನವೀಕರಣ ಆಗಿರುವುದಿಲ್ಲವೆಂದು ಅಧಿಕಾರಿಗಳು ತಿಳಿಸಿರುತ್ತಾರೆ. ಮಳಿಗೆಗಳ ಕರಾರುಪತ್ರವನ್ನು ಇದುವರೆವಿಗೂ ನವೀಕರಿಸದೇ ಇರುವುದು ಕಂಡುಬಂದಿದ್ದು, ಇದು ಹಿಂದಿನಿಂದ ಕಾರ್ಯ ನಿರ್ವಹಿಸಿರುವ ಅಧಿಕಾರಿಗಳ ನಿರ್ಲಕ್ಷ್ಯದಿಂದ ಆಗಿರುತ್ತದೆ ಎಂದು ಈ ಬಗ್ಗೆ ಸಮಿತಿಯು ತೀವ್ರ ಅಸಮಾಧಾನ ವ್ಯಕ್ತಪಡಿಸಿ, ಕೂಡಲೇ ಪರವಾನಗಿಯ ನವೀಕರಣದ ಬಗ್ಗೆ ಜರೂರುಕ್ರಮ ಕೈಗೊಂಡು ಕಡತವನ್ನು ಅಯುಕ್ತರ ಮುಖೇನ ಸಮಿತಿಗೆ ಮಂಡಿಸುವಂತೆ ಉಪ ಆಯುಕ್ತರು(ಮಾರುಕಟ್ಟೆ)ರವರಿಗೆ ಸೂಚಿಸಿತು.

ರಸಲ್ ಮಾರುಕಟ್ಟೆಯು ಬೆಂಕಿ ಅವಗಡಕ್ಕೀಡಾದ ನಂತರ ಈ ಹಿಂದೆ ವ್ಯಾಪಾರ ನಡೆಸುತ್ತಿದ್ದ, ಮಳಿಗೆದಾರರು ಅನಧಿಕೃತವಾಗಿ ಮಳಿಗೆಗಳನ್ನು ಅಂತರಿಕ ನವೀಕರಣ ಮಾಡಿಕೊಂಡು ವಿದ್ಯುತ್ ಸಂಪರ್ಕವನ್ನು ಸಹ ಪಡೆದುಕೊಂಡು ಪಾಲಿಕೆಗೆ ಪರವಾನಗಿ ಶುಲ್ಕವನ್ನು ಪಾವತಿಸದೇ, ಪಾಲಿಕೆಯಿಂದ ನೋಟೀಸ್ ಜಾರಿ ಮಾಡಿದ್ದರೂ ಸಹ ಲೆಕ್ಕಿಸದೇ ಸುಮಾರು ಎರಡು ವರ್ಷಗಳಿಂದ ವ್ಯಾಪಾರ ವಹಿವಾಟು ನಡೆಸುತ್ತಿರುವುದನ್ನು ಅಧಿಕಾರಿಗಳು ಸಮಿತಿಯ ಗಮನಕ್ಕೆ ತಂದಿರುತ್ತಾರೆ. ಸದರಿ ಮಾರುಕಟ್ಟೆಯನ್ನು ಪುನರ್ ನಿರ್ಮಿಸುವ ಪ್ರಸ್ತಾವನೆ ಇರುವುದಾಗಿ ತಿಳಿದುಬಂದಿದ್ದು, ಇವರಿಗೆ ತಾತ್ಕಾಲಿಕ ಮಳಿಗೆಗಳನ್ನು ನಿರ್ಮಿಸಿ, ಕೊಡುವವರೆವಿಗೂ ಪಾಲಿಕೆಯ ಆರ್ಥಿಕ ಹಿತದೃಷ್ಟಿಯಿಂದ ಹಾಲಿ ಉಪಯೋಗಿಸುತ್ತಿರುವ ಮಳಿಗೆಗಳ ಬಾಕಿ ಇರುವ ಪರವಾನಗಿ ಶುಲ್ಕವನ್ನು ಅಗತ್ಯ ಷರಿತ್ತಿಗೊಳಪಡಿಸಿ, ವಸೂಲಿ ಮಾಡುವುದು. ಈ ಕ್ರಮಕ್ಕೆ ಕಾನೂನು ತೊಡಕು ಇದ್ದಲ್ಲಿ ಹಾಲಿ ಇರುವ ಕಟ್ಟಡದಲ್ಲಿ ಮುಂದೆ ಉಂಟಾಗಬಹುದಾದ ಅನಾಹುತಗಳನ್ನು ತಡೆಗಟ್ಟುವ ಸಲುವಾಗಿ ಹಾಗೂ ವ್ಯಾಪಾರಸ್ಥರು ಮತ್ತು ಗ್ರಾಹಕರ ಹಿತದೃಷ್ಟಿಯಿಂದ ಹಾಲಿ ವ್ಯಾಪಾರ ಮಾಡುತ್ತಿರುವವರನ್ನು ಕಟ್ಟಡದಿಂದ ಕೂಡಲೇ ತೆರವುಗೊಳಿಸಲು ಆಯುಕ್ತರು ಕ್ರಮ ಕೈಗೊಳ್ಳುವುದು ಸೂಕ್ತವೆಂದು ಸಮಿತಿಯು ಅಭಿಪ್ರಾಯಿಸಿತು.

ಸಣ್ಣ ಮಾರುಕಟ್ಟೆಗಳ ಬಗ್ಗೆ ಸವಿವರವಾಗಿ ಮಾರುಕಟ್ಟೆ ಹಾಗೂ ಮಳಿಗೆವಾರು ಮಾಹಿತಿಗಳನ್ನು ಪರಿಶೀಲಿಸಲಾಗಿ, ಬಹುತೇಕ ಎಲ್ಲಾ ಮಾರುಕಟ್ಟೆಗಳಲ್ಲಿ ದೊಡ್ಡ ಆಳತೆಗಳುಳ್ಳ ಮಳಿಗೆಗಳಿಗೆ ಸುಮಾರು ರೂ.115/- ರಿಂದ 300/- ಗಳವರೆವಿಗೂ ಅತೀ ಕಡಿಮೆ ಪರವಾನಗಿ ಶುಲ್ಕ ಇದ್ದು, ಇದರಿಂದ ಕಟ್ಟಡದ ನಿರ್ವಹಣೆ ಮಾಡಲು ಸಹ ಸಾಧ್ಯವಾಗುವುದಿಲ್ಲ. ಇದರಿಂದ ಪಾಲಿಕೆಗೆ ಆರ್ಥಿಕ ನಷ್ಟವಾಗುತ್ತಿರುವುದು ಕಂಡುಬಂದಿರುತ್ತದೆ. ಈ ಮಳಿಗೆಗಳಿಗೂ ಸಹ ಹಂಚಿಕೆಯಾದಾಗಿನಿಂದ ಅಂದರೆ 1975-76 ನಿಂದ ಇದುವರೆವಿಗೂ ಪರವಾನಗಿ ನವೀಕರಣ ಮಾಡದೇ ಇರುವುದು ಕಂಡುಬಂದಿದ್ದು, ಅಧಿಕಾರಿಗಳು ಈ ಬಗ್ಗೆ ನಿಗಾ ವಹಿಸದೇ ಹಾಗೆಯೇ ಮುಂದುವರಿಸಿಕೊಂಡು ಬಂದಿರುವುದು ವಿಷಾಧನೀಯ. ಈ ಬಗ್ಗೆ ಹಿರಿಯ ಅಧಿಕಾರಿಗಳು ಪಾಲಿಕೆಯ ಅರ್ಥಿಕ ಹಿತದೃಷ್ಟಿಯಿಂದ ಹಾಗೂ ಇಲಾಖೆಯಲ್ಲಿ ಹದಗೆಟ್ಟಿರುವ ವ್ಯವಸ್ಥೆಯನ್ನು ಸರಿಪಡಿಸುವ ನಿಟ್ಟಿನಲ್ಲಿ ತಕ್ಷಣ ಕಾರ್ಯೋನ್ಮುಖರಾಗಬೇಕು ಬಾಡಿಗೆಯನ್ನು ಪರಿಷ್ಕರಿಸಬೇಕು ಎಂದು ಸಮಿತಿಯು ಹಾಜರಿದ್ದ ಎಲ್ಲಾ ಅಧಿಕಾರಿಗಳಿಗೆ ಸೂಚಿಸಿತು ಹಾಗೂ ಪಾಲಿಕೆಯ ಆರ್ಥಿಕ ಹಿತದೃಷ್ಟಿಯಿಂದ ಬಾಕಿ ಇರುವ ಮೊತ್ತದಲ್ಲಿ ಶೇಕಡ 75% ಪರವಾನಗಿ ಶುಲ್ಕವನ್ನು 15 ದಿನಗಳೊಳಗಾಗಿ ವಸೂಲಿ ಮಾಡಲು ಹಿರಿಯ ಅಧಿಕಾರಿಗಳು ಹಾಗೂ ನೌಕರರಿಗೆ ಸೂಚಿಸಲಾಯಿತು.

ಟಾನರಿ ರಸ್ತೆಯಲ್ಲಿರುವ ಮಳಿಗೆಗಳಿಂದ ಬಾಕಿ ವಸೂಲಾತಿ ಆಗಬೇಕಾಗಿದ್ದು, ಜೋಗುಪಾಳ್ಯದಿಂದ 4 ಲಕ್ಷ ಬಾಕಿ ಇರುತ್ತದೆ. ಕಂದಾಯ ವಸೂಲಿಗಾರರಾದ ಜಗದೀಶ್‌ರವರು 1 ತಿಂಗಳಿನಲ್ಲಿ ಎಲ್ಲಾ ವಸೂಲಿ ಮಾಡುವುದಾಗಿ ತಿಳಿಸಿರುತ್ತಾರೆ. ಈ ಎಲ್ಲಾ ಪರಿಷ್ಕರಣೆ ಆಗದೇ ಇರುವ ಮಳಿಗೆಗಳಿಗೆ ಎಸ್.ಆರ್. ದರದಲ್ಲಿ ಪರವಾನಗಿ ಶುಲ್ಕವನ್ನು ನಿಗದಿಪಡಿಸಬೇಕು ಪಾಲಿಕೆಗೆ ಅದಾಯ ಬರುವಂತೆ ಕ್ರಮಕೈಗೊಳ್ಳಲು ಸದಸ್ಯರು ಸೂಚಿಸಿದರು.

ಜಯರಾಮ್ ನಗರದ ಮಳಿಗೆ ಸಂಖ್ಯೆ: 3ಕ್ಕೆ 45 ಸಾವಿರ ಬಾಕಿ ಇರುವುದಾಗಿಯೂ, ಕಾರ್ಕ್ಸ್‌ಟೌನ್‌ನಲ್ಲಿ 10 ವರ್ಷದಿಂದ

ಮಟನ್ ವ್ಯಾಪಾರ ನಡೆಯುತ್ತಿದ್ದು, 3 ಅಂಗಡಿಗಳಿಂದ ಯಾವುದೇ ಬಾಡಿಗೆ ಬರುತ್ತಿಲ್ಲವೆಂದು ತಿಳಿಸಿದರು. ಈ ಮಳಿಗೆಗಳನ್ನು ಕೂಡಲೇ ಪರಿಶೀಲಿಸಿ, ಅಧಿಕೃತವೇ ಅಥವಾ ಅನಧಿಕೃತವೇ, ಅಧಿಕೃತವಾಗಿದ್ದಲ್ಲಿ ಏಕೆ ಪರವಾನಗಿ ಶುಲ್ಕ ಪಾವತಿಸುತ್ತಿಲ್ಲವೆಂಬ ಬಗ್ಗೆ ಕಂದಾಯಾಧಿಕಾರಿ(ಮಾರುಕಟ್ಟೆ) ರವರು ಖುದ್ದಾಗಿ ಪರಿಶೀಲಿಸಿ, ಸಮಿತಿಗೆ ವರದಿ ಮಂಡಿಸಲು ಸೂಚಿಸಲಾಯಿತು.

ಒ.ಪಿ.ಎಸ್. ರಸ್ತೆಯಲ್ಲಿರುವ ಕೋತಾಸ್ ಕಾಫಿ ಮಳಿಗೆಯ ಹಂಚಿಕೆದಾರರು ಹೆಚ್ಚಿನ ಬಾಕಿ ಉಳಿಸಿಕೊಂಡಿರುವುದು ಕಂಡುಬಂದಿರುತ್ತದೆ. ಕಮರ್ಷಿಯಲ್ ಷಾಪ್‌ಗಳು 32x17 ಅಳತೆಗಳಿದ್ದು, ರೂ.1180/-ಗಳು ಮಾತ್ರ ಬಾಡಿಗೆ ಬರುತ್ತಿದ್ದು, ಒಬ್ಬರಿಗೆ 3 ಅಂಗಡಿಗಳು ಸೇರಿರುತ್ತದೆ. ಶಾಂತಿನಗರ, ಅಕ್ಕಿತಿಮ್ಮೇನಹಳ್ಳಿ ಮಾರುಕಟ್ಟೆಗಳಿಂದ 32ಲಕ್ಷ ಬಾಕಿ ಇರುವುದಾಗಿಯೂ, ನಾಲ ರಸ್ತೆಯಲ್ಲಿ ದೊಡ್ಡ ಮೋರಿ ಮೇಲೆ 103 ಅಂಗಡಿಗಳಿದ್ದು, ಇವುಗಳಿಂದ ಯಾವುದೇ ರೀತಿಯ ಬಾಡಿಗೆ ಬರುತ್ತಿಲ್ಲವೆಂದು ತಿಳಿಸಿದರು.

ನಾಗರೀಕರಿಗೆ ಉಪಯುಕ್ತವಾಗದೇ, ಮಾರುಕಟ್ಟೆಗೆ ಯೋಗ್ಯವಲ್ಲದ, ಶಿಥಿಲಾವಸ್ಥೆಯಲ್ಲಿರುವ ಹಾಗೂ ಮಳಿಗೆಗಳನ್ನು ವಸತಿಯನ್ನಾಗಿ ಪರಿವರ್ತಿಸಿಕೊಂಡು ಉಪಯೋಗಿಸುತ್ತಿರುವ ಸಣ್ಣ ಮಾರುಕಟ್ಟೆಗಳ ವಿಡಿಯೋ ಚಿತ್ರೀಕರಣ ನಡೆಸಿ ಸಂಪೂರ್ಣ ಮಾಹಿತಿ ಸಹಿತ ಸಾರ್ವಜನಿಕ ಸಂಪರ್ಕಾಧಿಕಾರಿರವರೊಂದಿಗೆ ಒಡಗೂಡಿ, ಪವರ್ ಪಾಯಿಂಟ್ ಪ್ರೆಸೆಂಟೇಷನ್ ಸಿದ್ಧಪಡಿಸಿ, ಜರೂರಾಗಿ ಸಮಿತಿಗೆ ಒದಗಿಸಲು ಸೂಚಿಸಲಾಯಿತು.

**ದಿನಾಂಕ: 10-12-2013 : ಪಶ್ಚಿಮ ವಲಯ :**

ಶ್ರೀ ಕೃಷ್ಣರಾಜೇಂದ್ರ ಮಾರುಕಟ್ಟೆಯಲ್ಲಿ ಅಪ್ಪರ್ ಬೇಸ್‌ಮೆಂಟ್‌ನಲ್ಲಿ ಒಟ್ಟು 518 ಮಳಿಗೆಗಳಿದ್ದು, ಈ ಅಂತಸ್ತಿನಲ್ಲಿ ಒಟ್ಟು ಬಾಡಿಗೆ ತಿಂಗಳಿಗೆ ರೂ.3.78 ಲಕ್ಷಗಳಿದ್ದು ಈವರೆವಿಗೂ ಒಟ್ಟು ಬಾಕಿ ರೂ. 10,24,508/- ಗಳು ಇರುತ್ತದೆ. ಮೊದಲನೇ ಅಂತಸ್ತಿನ ಮಳಿಗೆಗಳ ಪರವಾನಗಿ ಶುಲ್ಕ ವಸೂಲಾತಿ ಬಗ್ಗೆ ಪರಿಶೀಲಿಸಲಾಯಿತು. ಈ ಅಂತಸ್ತಿನಲ್ಲಿ ಬಹುತೇಕ ಕಬ್ಬಿಣದ ಬಿಡಿಭಾಗಗಳ ಮಳಿಗೆಗಳಿದ್ದು, ಈ ಮಳಿಗೆಗಳ ಹಂಚಿಕೆದಾರರುಗಳು ಸರಿಯಾಗಿ ಪರವಾನಗಿ ಶುಲ್ಕವನ್ನು ಪಾವತ್ತಿಸುತ್ತಿಲ್ಲವೆಂದು ಅಧಿಕಾರಿಗಳು ತಿಳಿಸಿದ್ದು, ಪಾಲಿಕೆಯ ಆರ್ಥಿಕ ದೃಷ್ಟಿಯಿಂದ ಸಹ ಕಂದಾಯಾಧಿಕಾರಿಯವರು ಖುದ್ದಾಗಿ ಮಳಿಗೆಗಳಿಗೆ ಭೇಟಿ ನೀಡಿ 15 ದಿವಸಗಳೊಳಗಾಗಿ, ಬಾಕಿ ವಸೂಲಿಯನ್ನು ಮಾಡಲು ಸೂಚಿಸಲಾಯಿತು. ಪಶ್ಚಿಮ ವಲಯಕ್ಕೆ ಸಂಬಂಧಪಟ್ಟ ಮಾರುಕಟ್ಟೆಗಳಲ್ಲಿನ ಮಳಿಗೆಗಳ ಹಂಚಿಕೆವಹಿ, ಬೇಡಿಕೆ ವಸೂಲಾತಿ ಮತ್ತು ಬಾಕಿ ವಹಿಗಳನ್ನು ನಿರ್ವಹಿಸಲಾಗುತ್ತಿದೆಯೇ ಎಂದು ಅಧ್ಯಕ್ಷರು ಪ್ರಶ್ನಿಸಿದ ಮೇರೆಗೆ ಸಮರ್ಪಕವಾಗಿ ಉತ್ತರಿಸಲಿಲ್ಲ. ಯಾವುದೇ ಮಾರುಕಟ್ಟೆಗಳಾಗಲಿ ಅಲ್ಲಿನ ಮಳಿಗೆಗಳನ್ನು ಹಂಚಿಕೆ ಮಾಡಿದಾಗ, ಹಂಚಿಕೆವಹಿಯಲ್ಲಿ ಮಳಿಗೆಯ ಸಂಪೂರ್ಣ ಮಾಹಿತಿಯನ್ನು ದಾಖಲಿಸಿ, ಹಂಚಿಕೆದಾರರ ಭಾವಚಿತ್ರವನ್ನು ಅಂಟಿಸಿ, ಸಂಬಂಧಪಟ್ಟ ಸಹ ಕಂದಾಯ ಅಧಿಕಾರಿಯವರು ಧೃಢಿಕರಿಸಿ, ಸಹಿಮಾಡಿರತಕ್ಕದ್ದು. ಪರವಾನಗಿ ಶುಲ್ಕವನ್ನು ಪರಿಷ್ಕರಿಸುವ ವಿವರಗಳನ್ನು ಬದಲಾವಣೆಯ ವಹಿಯಲ್ಲಿ ದಾಖಲಿಸಿ, ಬಾಕಿಯನ್ನು ಬೇಡಿಕೆ, ವಸೂಲಾತಿ ಮತ್ತು ಬಾಕಿ ವಹಿಯಲ್ಲಿ ಅಗ್ಗಿಂದಾಗ್ಗೆ ದಾಖಲಿಸಿಕೊಂಡು, ಸರಿಯಾದ ಲೆಕ್ಕಾಚಾರವನ್ನು ನಿರ್ವಹಿಸತಕ್ಕದ್ದು. ಪರವಾನಗಿ ಶುಲ್ಕವನ್ನು ಸರಿಯಾಗಿ ಪಾವತಿಸದೇ ಬಾಕಿ ಉಳಿಸಿಕೊಳ್ಳುವ ಹಂಚಿಕೆದಾರರಿಗೆ ಅಗ್ಗಿಂದಾಗ್ಗೆ ನಿಯಮಾವಳಿ ರೀತ್ಯಾ ನೋಟೀಸ್‌ಗಳನ್ನು ಜಾರಿ ಮಾಡಿ, ವಸೂಲಿ ಮಾಡತಕ್ಕದ್ದು. ಪಾವತಿ ಮಾಡದ್ದಿದ್ದಲ್ಲಿ ಕಾನೂನು ರೀತ್ಯಾ ಅಗತ್ಯ ಕ್ರಮಗಳನ್ನು ಕೂಡಲೇ ಜರುಗಿಸತಕ್ಕದ್ದು. ಈ ಅಂಶಗಳನ್ನು ಸಂಬಂಧಪಟ್ಟ ಅಧಿಕಾರಿಗಳು ಪಾಲಿಸದೇ ಇರುವುದು ಕಂಡುಬಂದಲ್ಲಿ ಹಿರಿಯ ಅಧಿಕಾರಿಗಳು ಪರಿಶೀಲಿಸಿ, ಸಂಬಂಧಪಟ್ಟವರ ವಿರುದ್ಧ ಶಿಸ್ತು ಕ್ರಮ ಜರುಗಿಸಲು ಕ್ರಮ ಕೈಗೊಳ್ಳತಕ್ಕದೆಂದು ಸಮಿತಿಯು ಹಾಜರಿದ್ದ ಅಧಿಕಾರಿಗಳಿಗೆ ಸೂಚಿಸಿತು.

ಪರವಾನಗಿ ಶುಲ್ಕವನ್ನು ಹಳೆಯ ದರದಲ್ಲಿ ವಸೂಲಿ ಮಾಡಲಾಗುತ್ತಿದ್ದು, ಮಳಿಗೆಗಳ ಪರವಾನಗಿ ಶುಲ್ಕದ ಪರಿಷ್ಕರಣೆ ಬಹಳ ವರ್ಷಗಳಿಂದ ಅಗಿಲ್ಲದೇ ಇರುವುದು ಪಾಲಿಕೆಯ ಬೊಕ್ಕಸಕ್ಕೆ ನಷ್ಟವುಂಟಾಗಿರುತ್ತದೆ. ಆದುದರಿಂದ ಹಿರಿಯ ಅಧಿಕಾರಿಗಳು ಈ ಬಗ್ಗೆ ತಕ್ಷಣ ಎಚ್ಚೆತ್ತುಕೊಂಡು ಪರವಾನಿಗಿ ಶುಲ್ಕದ ಪರಿಷ್ಕರಣೆಗೆ ಸರಿಯಾದ ವೈಜ್ಞಾನಿಕ ಲೆಕ್ಕಾಚಾರವನ್ನು ಮಾಡಿ, ಪ್ರಸ್ತಾವನೆಯನ್ನು ಆಯುಕ್ತರ ಮುಖಾಂತರ ಸ್ಥಾಯಿ ಸಮಿತಿಗೆ ಮಂಡಿಸತಕ್ಕದೆಂದು ಮತ್ತೊಮ್ಮೆ ಸಮಿತಿಯ ಸದಸ್ಯರೆಲ್ಲರೂ ಸೂಚಿಸಿದರು.

... 4

ಅವಿನ್ಯೂ ರಸ್ತೆ, ಬಳೆಪೇಟೆ, ಅಕ್ಕಿಪೇಟೆ ಹೀಗೆ ನಾಗರೀಕರಿಗೆ ಉಪಯುಕ್ತವಾಗದೇ ಮಾರುಕಟ್ಟೆಗೆ ಯೋಗ್ಯವಲ್ಲದ ಶಿಥಿಲಾವಸ್ಥೆಯಲ್ಲಿರುವ ಹಾಗೂ ಮಳಿಗೆಗಳನ್ನು ವಸತಿಯನ್ನಾಗಿ ಪರಿವರ್ತಿಸಿಕೊಂಡು ಉಪಯೋಗಿಸುತ್ತಿರುವ ಸಣ್ಣ ಮಾರುಕಟ್ಟೆಗಳ ವಿಡಿಯೋ ಚಿತ್ರೀಕರಣ ನಡೆಸಿ ಸಂಪೂರ್ಣ ಮಾಹಿತಿ ಸಹಿತ ಸಾರ್ವಜನಿಕ ಸಂಪರ್ಕಾಧಿಕಾರಿಯವರೊಂದಿಗೆ ಒಡಗೂಡಿ ಪವರ್‌ಪಾಯಿಂಟ್ ಪ್ರೆಸೆಂಟೇಷನ್ ಸಿದ್ಧಪಡಿಸಿ, ಜರೂರಾಗಿ ಸಮಿತಿಗೆ ಒದಗಿಸಲು ಸೂಚಿಸಲಾಯಿತು.

ಎಲ್ಲಾ ಸಣ್ಣ ಮಾರುಕಟ್ಟೆಗಳ ಪರವಾನಗಿ ಶುಲ್ಕದ ಮಾಹಿತಿಯನ್ನು ಮಾರುಕಟ್ಟೆವಾರು ಪರಿಶೀಲಿಸಲಾಯಿತು. ಇದರಲ್ಲಿಯೂ ಸಹ ಕೆಲವು ಮಾರುಕಟ್ಟೆಗಳಲ್ಲಿ ಬಾಕಿ ಉಳಿಸಿಕೊಂಡಿದ್ದು, 15 ದಿವಸಗಳೊಳಗಾಗಿ ಬಾಕಿ ಮೊತ್ತವನ್ನು ವಸೂಲಿ ಮಾಡಿ, ಸಮಿತಿಗೆ ವರದಿ ಸಲ್ಲಿಸಲು ಸೂಚಿಸಲಾಯಿತು.

**ವಿಷಯದ ಸಂಖ್ಯೆ: ಮಾ.ಸ್ಥಾ.ಸ/04/2013-14**

ಆಯುಕ್ತರ ದಿನಾಂಕ: 5-7-2013 ರ ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಶ್ರೀ.ಎಸ್.ಎ.ಬಾಬು ಬಿನ್ ಸುಬ್ರಮಣಿಯನ್, ರವರಿಗೆ ಗುಂಡೋಪಂತ್ ರಸ್ತೆಯ ಪಕ್ಕದಲ್ಲಿರುವ ಕೆ.ಆರ್.ಮಾರುಕಟ್ಟೆ ಅವರಣದಲ್ಲಿ ಬಾಳೆ ಎಲೆ ಮಳಿಗೆ ಸಾಲಿನಲ್ಲಿ ಮಳಿಗೆ ಸಂಖ್ಯೆ:114ರ ಎದುರು ಖಾಲಿ ಇರುವ ಜಾಗದಲ್ಲಿ 8*8 ಅಡಿಗಳ ವಿಸ್ತೀರ್ಣದ ಜಾಗವನ್ನು ಹಂಚಿಕೆ ಮಾಡುವ ಕುರಿತು ಟಿಪ್ಪಣಿಯನ್ನು ಮಂಡಿಸುವಂತೆ ಮಾರುಕಟ್ಟೆ ಸ್ಥಾಯಿ ಸಮಿತಿ ಅಧ್ಯಕ್ಷರು ದಿ:02-01-2013ರಂದು ಮುಖೇನ ಕೋರಿರುತ್ತಾರೆ.

ಗುಂಡೋಪಂತ್ ರಸ್ತೆಯ ಪಕ್ಕದಲ್ಲಿರುವ ಕೆ.ಆರ್. ಮಾರುಕಟ್ಟೆ ಅವರಣದಲ್ಲಿ ಬಾಳೆ ಎಲೆ ತಾತ್ಕಾಲಿಕ ಮಳಿಗೆಗಳು ಮುಂದುವರೆದಿದ್ದು, ಸದರಿ ಮಳಿಗೆಯಲ್ಲಿ ಹಿಂದೆ ಹಳೆಯ ಕಟ್ಟಡದ ಕೆಲವು ಮೂಲ ಪರವಾನಗಿದಾರರಿಗೆ ಮೇಲ್ಕಂಡಂತೆ ತಾತ್ಕಾಲಿಕ ಮಳಿಗೆಗಳನ್ನು ಅವರ ಸ್ವಂತ ಖರ್ಚಿನಿಂದ ನಿರ್ಮಿಸಿಕೊಂಡು ಮುಂದುವರೆಯಲು ಸೂಚಿಸಲಾದ್ದ ಮೇರೆಗೆ ಪರವಾನಗಿದಾರರು ಹಾಲಿ ಸ್ಥಳದಲ್ಲಿ ಮುಂದುವರಿದಿದ್ದು, ಈ ಅಂಗಡಿಗಳ ಪಕ್ಕದಲ್ಲಿ ಖಾಲಿ ಜಾಗವಿದ್ದು, ಸದರಿ ಜಾಗವು ಬಾಳೆ ಎಲೆ ಕಚ್ಚಾ ವಸ್ತುಗಳನ್ನು ಶೇಖರಿಸಲು ಉಪಯೋಗವಾಗುತ್ತಿರುತ್ತದೆ.

ನಗರ ಪಾಲಿಕೆಯಲ್ಲಿ ಖಾಲಿ ಜಾಗಗಳನ್ನು ಹಂಚಿಕೆ ಮಾಡಿರುವುದು ಕಂಡು ಬರುತ್ತಿಲ್ಲವಾದರೂ ಪಾರದರ್ಶಕ ಕಾಯ್ದೆ ಅನ್ವಯ ಯಾವುದೇ ಖಾಲಿ ಜಾಗ/ಮಳಿಗೆಗಳನ್ನು ಹಂಚಿಕೆ ಮಾಡಬೇಕಾದ್ದಲ್ಲಿ ಟೆಂಡರ್-ಕಂ-ಹರಾಜಿನ ಮೂಲಕವೇ ಹಂಚಿಕೆ ಮಾಡಬೇಕಾಗಿರುತ್ತದೆ. ಅರ್ಜಿದಾರರು ಕೋರುತ್ತಿರುವ ಪ್ರದೇಶವು ತಾತ್ಕಾಲಿಕ ಮಳಿಗೆಗಳ ಪ್ರದೇಶದಲ್ಲಿರುವ ಖಾಲಿ ಜಾಗವಾಗಿದ್ದು. ಯಾರಿಗೂ ಹಂಚಿಕೆ ಮಾಡಿರುವುದಿಲ್ಲ.

ಮುಂದುವರೆದಂತೆ ಕೆ.ಎಂ.ಸಿ.ಕಾಯ್ದೆ 1976ರ ಸೆಕ್ಷನ್ 176 ರಲ್ಲಿ ಪಾಲಿಕೆಯ ಮಳಿಗೆಗಳನ್ನು ನೇರವಾಗಿ ಗುತ್ತಿಗೆ/ಪರಬಾರೆ ಮಾಡುವ ಅಧಿಕಾರವನ್ನು ಈ ಕೆಳಕಂಡಂತೆ ಪ್ರತ್ಯಾಯೋಜನೆಮಾಡಲಾಗಿದೆ. ಎರಡು ವರ್ಷಗಳ ಅವಧಿಗೆ ಮೀರದಂತೆ ಪಾಲಿಕೆ ಆಯುಕ್ತರವರಿಗೆ. ಮೂರು ವರ್ಷಗಳ ಅವಧಿಗೆ ಮೀರದಂತೆ ಸಂಬಂಧಪಟ್ಟ ಸ್ಥಾಯಿ ಸಮಿತಿಗೆ, ಐದು ವರ್ಷಗಳಿಗೆ ಮೀರಿದ ಅವಧಿಗೆ ಪಾಲಿಕೆಯ ಸಭೆಯ ನಿರ್ಣಯದ ನಂತರ ಸರ್ಕಾರದ ಅನುಮೋದನೆ ಪಡೆಯಬೇಕಾಗಿರುತ್ತದೆ.

ಮೇಲ್ಕಂಡ ಅಂಶಗಳನ್ನು ಒಳಗೊಂಡ ಟಿಪ್ಪಣಿಯನ್ನು ಮಾರುಕಟ್ಟೆಯ ಸ್ಥಾಯಿ ಸಮಿತಿ ಮುಂದೆ ತೀರ್ಮಾನಕ್ಕಾಗಿ ಮಂಡಿಸಿರುವ ಆಯುಕ್ತರ ಟಿಪ್ಪಣಿ.

ನಿರ್ಣಯ: ದಿನಾಂಕ: 3-10-2013 - ಮುಂದೂಡಿದೆ.

ದಿನಾಂಕ: 10-12-2013ರ ನಿರ್ಣಯ: ಮಾನ್ಯ ಆಯುಕ್ತರ ದಿ: 5/7/12ರ ಟಿಪ್ಪಣಿಯ ಬಗ್ಗೆ ಚರ್ಚಿಸಲಾಯಿತು ಹಾಗೂ ಅರ್ಜಿದಾರರ ಮನವಿಯನ್ನು ತಿರಸ್ಕರಿಸಲು ಸಮಿತಿಯು ತೀರ್ಮಾನಿಸಿತು.

**ದಿನಾಂಕ: 12-12-2013 : ಹೊಸ ವಲಯಗಳು**

**ಯಲಹಂಕ ವಲಯ :**

ಪಾಲಿಕೆಯ ಯಲಹಂಕ ವಲಯದಲ್ಲಿ ಯಲಹಂಕ ಉಪ ವಿಭಾಗದ ವ್ಯಾಪ್ತಿಯಲ್ಲಿ ಎನ್.ಇ.ಎಸ್. ಕಛೇರಿ ಹತ್ತಿರ 10ನೇ ಹಣಕಾಸು ಯೋಜನೆಯಡಿಯಲ್ಲಿ ನಿರ್ಮಿಸಲಾಗಿರುವ 68 ವಾಣಿಜ್ಯ ಮಳಿಗೆಗಳು ಇರುತ್ತವೆ ಎಂದು ತಿಳಿಸಿ,

..... 5

ಅಧಿಕಾರಿಗಳು ಮಳಿಗೆಗಳ ಮಾಹಿತಿಯುಳ್ಳ ಪಟ್ಟಿಯನ್ನು ಸಮಿತಿಗೆ ಒದಗಿಸಿರುತ್ತಾರೆ. ಸದರಿ 68 ಮಳಿಗೆಗಳಲ್ಲಿ 31 ಮಳಿಗೆಗಳು ಖಾಲಿ ಇರುವುದು ಕಂಡುಬಂದಿರುತ್ತದೆ. ಉಳಿದ 3 ಮಳಿಗೆಗಳನ್ನು ಶ್ರೀ.ವೇಣುಗೋಪಾಲಸ್ವಾಮಿ, ಟ್ರಸ್ಟ್‌ರವರು ಬಿಬಿಎಂಪಿ ಕಛೇರಿ ನಿರ್ಮಿಸಲು ಸ್ಥಳ ನೀಡಿರುವುದಕ್ಕೆ ಬದಲಾಗಿ, ಈ ಮೂರು ಅಂದರೆ ಮಳಿಗೆ ಸಂಖ್ಯೆ: 66, 67 ಮತ್ತು 68 ಗಳನ್ನು ನೀಡಲಾಗಿದೆ ಎಂದು ಷರಾದಲ್ಲಿ ನಮೂದಿಸಲಾಗಿರುತ್ತದೆ. ಈ ಮಳಿಗೆಗಳಿಂದಲೂ ಸಹ ಕೆಲವರು ಬಾಕಿ ಉಳಿಸಿಕೊಂಡಿದ್ದು, ನೋಟೀಸ್ ನೀಡಿರುವುದಾಗಿ ಅಧಿಕಾರಿಗಳು ತಿಳಿಸಿರುತ್ತಾರೆ. ಸದರಿ ಮಳಿಗೆಗಳ ಬಾಕಿ ಉಳಿಸಿಕೊಂಡಿರುವ ಬಾಡಿಗೆ ಮೊತ್ತವನ್ನು ತ್ವರಿತವಾಗಿ ವಸೂಲಿ ಮಾಡುವಂತೆ ಹಾಗೂ ಮಾಹಿತಿಗಳನ್ನು ಉಪ ಆಯುಕ್ತರು (ಮಾರುಕಟ್ಟೆ)ರವರಿಗೂ ಕಳುಹಿಸಲು ಹಾಜರಿದ್ದ ಅಧಿಕಾರಿಗಳಿಗೆ ಅಧ್ಯಕ್ಷರು ಸೂಚಿಸಿದರು.

**ಮಹದೇವಪುರ ವಲಯ** :

ಕೆ.ಆರ್. ಪುರಂ ಸಂತೆ ಮೈದಾನದಲ್ಲಿ ಒಟ್ಟು 112 ಅಂಗಡಿಗಳು ಇರುವುದಾಗಿಯೂ, ಆದರೆ ಇವುಗಳಿಗೆ ಬಾಗಿಲುಗಳು ಇಲ್ಲದಿರುವುದರಿಂದ ಯಾರು ಬಾಡಿಗೆ ಕೊಡುತ್ತಿಲ್ಲವೆಂದು, ಆದರೆ ಸದರಿ ಅಂಗಡಿಗಳ ಮುಂದೆ ತೆರದ ಅಂಗಳದಲ್ಲಿ ವ್ಯಾಪಾರ ನಡೆಸುತ್ತಿರುವುದಾಗಿಯೂ ತಿಳಿಸಿರುತ್ತಾರೆ. ಸದರಿ ಅಂಗಡಿಗಳನ್ನು ಕೆಡವಿ ಹಾಕಿ ಹೊಸ ಅಂಗಡಿಗಳನ್ನು ಮಾಡುವವರೆಗೂ ಬಾಡಿಗೆ ಕೊಡುವುದಿಲ್ಲವೆಂದು ವ್ಯಾಪಾರಿಗಳು ತಿಳಿಸಿರುವುದಾಗಿ ಅಧಿಕಾರಿಗಳು ತಿಳಿಸಿರುತ್ತಾರೆ. ಇದರಿಂದ ಅಸಮಾಧಾನಗೊಂಡ ಅಧ್ಯಕ್ಷರು ಅಂಗಡಿಗಳ ಮುಂದೆ ವ್ಯಾಪಾರ ನಡೆಸಲು ಅನುವು ಮಾಡಿಕೊಟ್ಟವರು ಯಾರು. ಇದರಿಂದ ಪಾಲಿಕೆಗೆ ಆರ್ಥಿಕ ನಷ್ಟವುಂಟಾದಂತಾಗುತ್ತದೆ ಇದಕ್ಕೆ ಅವಕಾಶ ನೀಡದೆ ಮಳಿಗೆಗಳಿಯೇ ವ್ಯಾಪಾರ ನಡೆಸುವಂತೆ ತಿಳುವಳಿಕೆ ನೀಡಲು ಹಾಗೂ ತಪ್ಪಿದಲ್ಲಿ ಕಾನೂನು ರೀತ್ಯಾ ಮುಂದಿನ ಅಗತ್ಯ ಕ್ರಮಕೈಗೊಳ್ಳಲು ಅಧ್ಯಕ್ಷರು ಸೂಚಿಸಿದರು.

ಸದರಿ ಮಳಿಗೆಗಳಿಗೆ ಸರಿಯಾದ ವಿದ್ಯುತ್ ವ್ಯವಸ್ಥೆ ಇಲ್ಲವೆಂದು, ಬಾಡಿಗೆ ಪರಿಷ್ಕರಣೆ ಮಾಡಿಲ್ಲವೆಂದು ತಿಳಿಸಿದರು. ಈ ಬಗ್ಗೆ ಸಂಬಂಧಪಟ್ಟವರಿಗೆ ಟಿಪ್ಪಣಿ ಕಳುಹಿಸಿ, ಅಗತ್ಯ ಸೌಕರ್ಯಗಳನ್ನು ಒದಗಿಸಲು ಕೋರುವಂತೆ ಸೂಚಿಸಲಾಯಿತು ಹಾಗೂ ಜಂಟಿ ಆಯುಕ್ತರು (ಮಹದೇವಪುರ) ವಲಯ ರವರಿಗೆ ಜರೂರಾಗಿ ಈ ಬಗ್ಗೆ ಕ್ರಮಕೈಗೊಳ್ಳಲು ದೂರವಾಣಿ ಮುಖಾಂತರ ಸೂಚಿಸಲಾಯಿತು. ಹಾಗೂ ಎಲ್ಲಾ ಮಾಹಿತಿಗಳನ್ನು ಉಪ ಆಯುಕ್ತರು (ಮಾರುಕಟ್ಟೆ)ರವರಿಗೂ ಕಳುಹಿಸಲು ಸೂಚಿಸಲಾಯಿತು.

**ಬೊಮ್ಮನಹಳ್ಳಿ ವಲಯ** :

ಬೊಮ್ಮನಹಳ್ಳಿ ವಲಯದಲ್ಲಿ ಒಟ್ಟು 40 ಅಂಗಡಿಗಳಿದ್ದು, 29 ಅಂಗಡಿಗಳನ್ನು ಬಾಡಿಗೆಗೆ ಕೊಟ್ಟಿರುವು ದಾಗಿಯೂ, 72ಲಕ್ಷ ರೂ.ಗಳು ಬಾಕಿ ಇರುವುದಾಗಿಯೂ, ಈ ಬಾಕಿ ಪಾವತಿಸುವಂತೆ ಮಳಿಗೆದಾರರಿಗೆ ನೋಟಿಸ್ ನೀಡಲಾಗಿರುತ್ತದೆ ಹಾಗೂ ಪರಿಷ್ಕರಣೆಯ ಬಗ್ಗೆಯೂ ಸಹ ಕ್ರಮಕೈಗೊಳ್ಳಲಾಗುತ್ತದೆ ಎಂದು ಉಪ ಆಯುಕ್ತರು (ಬೊಮ್ಮನಹಳ್ಳಿ) ರವರು ತಿಳಿಸಿದರು. ಪಾಲಿಕೆಯ ಆರ್ಥಿಕ ಹಿತದೃಷ್ಟಿಯಿಂದ ಜರೂರಾಗಿ ಬಾಕಿ ವಸೂಲಿ ಮಾಡಲು ಅದ್ಯತೆ ಮೇರೆಗೆ ಕ್ರಮವಹಿಸಲು ಹಾಗೂ ಮಾಹಿತಿಗಳನ್ನು ಉಪ ಆಯುಕ್ತರು (ಮಾರುಕಟ್ಟೆ)ರವರಿಗೂ ಕಳುಹಿಸಲು ಅಧ್ಯಕ್ಷರು ಸೂಚಿಸಿದರು.

**ದಾಸರಹಳ್ಳಿ ವಲಯ:**

ದಾಸರಹಳ್ಳಿ ವಲಯದಲ್ಲಿ ಪಾಲಿಕೆಯ ಮಳಿಗೆ ಹಾಗೂ ಮಾರುಕಟ್ಟೆ ಇರುವುದಿಲ್ಲವೆಂದು ಉಪ ಆಯುಕ್ತರು (ದಾಸರಹಳ್ಳಿ) ರವರು ಸಮಿತಿಯ ಗಮನಕ್ಕೆ ತಂದಿರುತ್ತಾರೆ.

**ಮಾರುಕಟ್ಟೆ ಇಲಾಖೆಯು** ನಗರದ ನಾಗರೀಕರಿಗೆ ಹೆಚ್ಚು ಹತ್ತಿರವಾದ ಇಲಾಖೆಯಾಗಿದ್ದು, ಇಲಾಖೆಯನ್ನು ಹಿರಿಯ ಅಧಿಕಾರಿಗಳು ನಿರ್ಲಕ್ಷ್ಯಮಾಡಿರುವುದು ಸಮಿತಿಯ ಗಮನಕ್ಕೆ ಬಂದಿರುತ್ತದೆ. ಸಾರ್ವಜನಿಕರು ದಿನನಿತ್ಯ ಬಳಸುವ ತರಕಾರಿ, ಹೂವು, ಹಣ್ಣು, ಆಹಾರ ಪದಾರ್ಥಗಳಿಗಾಗಿ, ಮಾರುಕಟ್ಟೆಗಳನ್ನು ಹೆಚ್ಚಾಗಿ ಅವಲಂಬಿಸಿದ್ದು, ಇಂತಹ ಅಗತ್ಯತೆಯ ವಸ್ತುಗಳನ್ನು ಪೂರೈಸುವ, ಶೇಖರಿಸುವ ಹಾಗೂ ವ್ಯಾಪಾರ ನಡೆಸುವ ಸ್ಥಳಗಳು ಗ್ರಾಹಕರ ಆರೋಗ್ಯದ ಹಿತದೃಷ್ಟಿಯಿಂದ ಉತ್ತಮ ಮೂಲಭೂತ ಸೌಕರ್ಯ ಹಾಗೂ ಶುಚಿತ್ವದಿಂದ ಕೂಡಿರಬೇಕು, ಇಲ್ಲಿ ಮೂಲಭೂತ ಸೌಕರ್ಯಗಳನ್ನು ಒದಗಿಸುವ ಸಲುವಾಗಿ, ಪಾಲಿಕೆಗೆ ಅದಾಯವು ಬಹುಮುಖ್ಯ ಆದುದರಿಂದ ಇಲಾಖೆಯ ಅಧಿಕಾರಿ, ನೌಕರರು ಇಲಾಖೆಯ ಪ್ರಾಮುಖ್ಯತೆಯನ್ನು ಅರಿತು ಒಗ್ಗೂಡಿ ಸಂಪನ್ಮೂಲವನ್ನು ಕ್ರೂಢೀಕರಿಸುವಲ್ಲಿ ಶ್ರಮವಹಿಸಬೇಕು. ಬಾಕಿ ಇರುವ ಬಾಡಿಗೆಯನ್ನು ಒಂದು ತಿಂಗಳೊಳಗಾಗಿ ಶೇಕಡ 75% ರಷ್ಟನ್ನು ವಸೂಲಿ ಮಾಡಿ ಸಮಿತಿಗೆ ವರದಿ ಸಲ್ಲಿಸುವಂತೆ ಉಪ ಆಯುಕ್ತರು (ಮಾರುಕಟ್ಟೆ) ಹಾಗೂ ಕಂದಾಯ ಅಧಿಕಾರಿಗಳಿಗೆ , ಅಧ್ಯಕ್ಷರು ಹಾಗೂ ಸಮಿತಿಯ ಸದಸ್ಯರೆಲ್ಲರೂ ಸೂಚಿಸಿದರು.

... 6

ಮಾರುಕಟ್ಟೆ ಇಲಾಖೆಗೆ ಅಗತ್ಯವಿರುವ ಸಿಬ್ಬಂದಿಯ ಬಗ್ಗೆ ಆಯುಕ್ತರು ತಕ್ಷಣ ಪರಿಶೀಲಿಸಿ ಸಿಬ್ಬಂದಿಯನ್ನು ಕೂಡಲೇ ನಿಯೋಜಿಸಬೇಕು ಹಾಗೂ ಮಾರುಕಟ್ಟೆ ಇಲಾಖೆಯ ಕಛೇರಿಗಳಿಂದ ಬೇರೆ ಕಛೇರಿಗಳಿಗೆ ಓಓಡಿ ಮೇಲೆ ನಿಯೋಜಿಸಿರುವವರ ಆದೇಶವನ್ನು ರದ್ದುಪಡಿಸಿ ಮಾರುಕಟ್ಟೆ ಇಲಾಖೆಯಲ್ಲಿಯೇ ಕಾರ್ಯನಿರ್ವಹಿಸುವಂತೆ ತಕ್ಷಣ ಅಪರ ಆಯುಕ್ತರು (ಆಡಳಿತ) ರವರಿಗೆ ಆಯುಕ್ತರು ಜರೂರಾಗಿ ಆದೇಶಿಸಲು ಅಗತ್ಯ ಕ್ರಮಕೈಗೊಳ್ಳಬೇಕೆಂದು ಸಮಿತಿಯು ಸೂಚಿಸಿತು.

**<u>ದಿನಾಂಕ: 13-12-2013 ದಕ್ಷಿಣ ವಲಯ :</u>**

ಜಯನಗರ ವಾಣಿಜ್ಯ ಸಂಕೀರ್ಣದಲ್ಲಿರುವ ಮಳಿಗೆಗಳಿಂದ ಒಟ್ಟು 8,59,00,071/- ಬಾಕಿ ಇರುವುದಾಗಿಯೂ, ಜಯಚಾಮರಾಜೇಂದ್ರ ಸಗಟು ತರಕಾರಿ ಮಾರುಕಟ್ಟೆ, ಕಲಾಸಿಪಾಳ್ಯಂ ಇದರಿಂದ ಒಟ್ಟು ರೂ. 98,20,751/- ಬಾಕಿ ಇರುವುದಾಗಿಯೂ, ಸಣ್ಣ ಮಾರುಕಟ್ಟೆಗಳಿಂದ ರೂ.1,40,40,142/- ಬಾಕಿ ಇರುವುದಾಗಿಯೂ, ಮಡಿವಾಳ ವಾಣಿಜ್ಯ ಸಂಕೀರ್ಣದಿಂದ ರೂ. 13,19,94,320/- ಬಾಕಿ ಇರುವುದಾಗಿಯೂ, ಎ.ಪಿ.ಎಂ.ಸಿ ಮಾರುಕಟ್ಟೆಯಿಂದ ರೂ.1,60,00,000/- ಬಾಕಿ ಇರುವುದಾಗಿಯೂ, ಒಟ್ಟು ರೂ. 25,77,55,284/- ಬಾಕಿ ಇರುವುದಾಗಿಯೂ ಅಧಿಕಾರಿಗಳು ತಿಳಿಸಿದರು. ಈ ವಲಯ ವ್ಯಾಪ್ತಿಗೆ ಬರುವ ಮಾರುಕಟ್ಟೆಗಳ ಬಾಕಿ ಇರುವ ಬಗ್ಗೆ ಮಾರುಕಟ್ಟೆವಾರು, ಮಳಿಗೆವಾರು ಸಮಗ್ರವಾಗಿ ಪರಿಶೀಲಿಸಲಾಯಿತು. ಬಾಕಿ ಉಳಿಸಿಕೊಂಡಿರುವ ಮಳಿಗೆಗಳ ಹಂಚಿಕೆದಾರರಿಂದ 15 ದಿವಸಗಳೊಳಗಾಗಿ ವಸೂಲಿ ಮಾಡುವಂತೆ ಸಂಬಂಧಪಟ್ಟ ಕಂದಾಯ ವಸೂಲಿಗಾರರು, ಸಹ ಕಂದಾಯ ಅಧಿಕಾರಿ, ರವರಿಗೆ ತಿಳಿಸಿ, ಕಂದಾಯಾಧಿಕಾರಿ ಮತ್ತು ಉಪ ಆಯುಕ್ತರು (ಮಾರುಕಟ್ಟೆ)ರವರು ವಸೂಲಾತಿಯ ಬಗ್ಗೆ ಅಗ್ಗಿಂದಾಗ್ಗೆ ಮೇಲ್ವಿಚಾರಣೆ ನಡೆಸುವಂತೆ ಸಮಿತಿಯು ಸೂಚಿಸಿತು. ತಪ್ಪಿದಲ್ಲಿ ನಿಯಮಾವಳಿಯ ರೀತ್ಯಾ ಕ್ರಮ ಕೈಗೊಳ್ಳಲು ಸೂಚಿಸಲಾಯಿತು. ಪರಿಷ್ಕರಣೆಗೆ ಸಂಬಂಧಪಟ್ಟಂತೆ ಸಣ್ಣ ಮಾರುಕಟ್ಟೆಗಳ ಮಳಿಗೆಗಳಿಗೂ ಸಹ ಬಹಳ ವರ್ಷಗಳಿಂದ ಪರವಾನಗಿ ಶುಲ್ಕ ಪರಿಷ್ಕರಣೆ ಆಗದೇ ಇರುವುದು, ಕರಾರು ಪತ್ರದ ನವೀಕರಣ ಮಾಡದೇ ಇರುವುದು, ಹಂಚಿಕೆದಾರರು ಪವತಿಯಾಗಿದ್ದಲ್ಲಿ ಕಾನೂನು ರೀತ್ಯಾ ಮುಂದಿನ ಕ್ರಮ ಕೈಗೊಳ್ಳದೇ ಇರುವುದನ್ನು ಸಮಿತಿಯು ಗಮನಿಸಿ, ಕೂಡಲೇ ಇವುಗಳ ಬಗ್ಗೆ ಕಾನೂನು ರೀತ್ಯಾ ಜರೂರಾಗಿ ಕ್ರಮ
ಕೈಗೊಂಡು ಸಮಿತಿಗೆ ಕಡತಗಳನ್ನು ಮಂಡಿಸಲು ಉಪ ಆಯುಕ್ತರು (ಮಾರುಕಟ್ಟೆ) ರವರಿಗೆ ಸಮಿತಿಯು ಸೂಚಿಸಿತು. ಕಛೇರಿಯಲ್ಲಿ ಪರವಾನಗಿ ಶುಲ್ಕದ ಬೇಡಿಕೆ, ವಸೂಲಾತಿ ಮತ್ತು ಬಾಕಿ ವಹಿಗಳು ಹಂಚಿಕೆ ವಹಿ ಹಾಗೂ ಪರಿಷ್ಕರಣೆಯ ವಹಿಗಳನ್ನು ಮೇಲಾಧಿಕಾರಿಗಳು ಪರಿಶೀಲಿಸಿ, ಕ್ರಮಬದ್ಧವಾಗಿ ನಿರ್ವಹಿಸುವ ಬಗ್ಗೆ ಅಗತ್ಯ ಕ್ರಮಕೈಗೊಳ್ಳಲು ಸಮಿತಿಯು ಹಾಜರಿದ್ದ ಎಲ್ಲಾ ಅಧಿಕಾರಿಗಳಿಗೂ ಸೂಚಿಸಿತು.

1) ವಿ.ವಿ.ಪುರಂ ಮಾರುಕಟ್ಟೆ 2) ಕಬ್ಬನ್‌ಪೇಟೆ ಮಾರುಕಟ್ಟೆ 3) ಗಾಂಧಿಬಜಾರ್ ಮಾರುಕಟ್ಟೆ 4) ಶ್ರೀನಗರ ಮಾರುಕಟ್ಟೆ 5) ಲಕ್ಕಸಂದ್ರ ಮಾರುಕಟ್ಟೆ 6) ಸಿದ್ಧಯ್ಯ ರಸ್ತೆ ಮಾರುಕಟ್ಟೆ 7) ಸಿರ್ಸಿ ರಸ್ತೆ ಮಾರುಕಟ್ಟೆ 8) ವಿಲ್ಸನ್‌ಗಾರ್ಡನ್ ಮಾರುಕಟ್ಟೆ ಇವುಗಳ ಒಳ ಮತ್ತು ಹೊರ ಭಾಗದ ಸಂಪೂರ್ಣ ವಿಡಿಯೋಗ್ರಫಿ ಹಾಗೂ ಛಾಯಾಚಿತ್ರಗಳನ್ನು ಸಂಪೂರ್ಣ ವರದಿಯೊಂದಿಗೆ ಪವರಪಾಯಿಂಟ್ ಪ್ರಸೆಂಟೇಷನ್ ಸಿದ್ದಪಡಿಸಿ, ಸಮಿತಿಗೆ ಒದಗಿಸಲು ಈಗಾಗಲೇ ಸಾರ್ವಜನಿಕ ಸಂಪರ್ಕಾಧಿಕಾರಿಯವರಿಗೆ ಸೂಚಿಸಿರುವಂತೆ ಅವರೊಂದಿಗೆ ಚರ್ಚಿಸಿ, ಈ ಬಗ್ಗೆ ಕ್ರಮ ವಹಿಸಲು ಸಮಿತಿಯು ಸೂಚಿಸಿತು.

**<u>ಘನ ನ್ಯಾಯಾಲಯಗಳಲ್ಲಿ ಬಾಕಿ ಇರುವ ಪ್ರಕರಣಗಳ ಬಗ್ಗೆ:</u>**

ಪೂರ್ವ ಮಾರುಕಟ್ಟೆಗಳಿಗೆ ಸಂಬಂಧಪಟ್ಟ ಓ.ಎಸ್.ನಂ. 6103/2006, ಕ್ರೌನ್ ಕೆನೋಫಿ, 2ನೇ ಅಂತಸ್ತು. ಪಿ.ಯು.ಬಿ. ಕಟ್ಟಡ, ಪರವಾನಗಿ ಶುಲ್ಕ ಪರಿಷ್ಕರಿಸಿರುವ ಬಗ್ಗೆ ಪ್ರಕರಣ ಬಾಕಿ ಇರುತ್ತದೆ.

ಡಬ್ಲ್ಯೂಪಿ.ನಂ. 18545/2012, ಎಂ.ಎನ್.ಪೂನಚ್ಚ, ಮಳಿಗೆ ನಂ.26, 1ನೇ ಅಂತಸ್ತು, ಪಿ.ಯು.ಬಿ.ಕಟ್ಟಡ, ಅನಧಿಕೃತವಾಗಿ ಮಳಿಗೆಯಲ್ಲಿ ಇದ್ದ ಮೇರೆಗೆ ತೆರವುಗೊಳಿಸುವ ಬಗ್ಗೆ ಪ್ರಕರಣ ಬಾಕಿ ಇರುತ್ತದೆ

ಡಬ್ಲ್ಯೂಪಿ.ನಂ. 47070-47071/2013, ಅಪೆಕ್ಸ್ ಬ್ಯಾಂಕ್, ಮಳಿಗೆ ಸಂಖ್ಯೆ:1, ನೆಲ ಮಹಡಿ, ಪಿ.ಯು.ಬಿ.ಕಟ್ಟಡ, ಪರವಾನಗಿ ಶುಲ್ಕ ಪರಿಷ್ಕರಿಸಿರುವ ಬಗ್ಗೆ ಪ್ರಕರಣ ಬಾಕಿ ಇರುತ್ತದೆ

ಓ.ಎಸ್.ನಂ. 304/2013, ಎಸ್.ಬಿ.ಎಂ. ಮಳಿಗೆ ನಂ.16, ನೆಲ ಮಹಡಿ, ಪಿ.ಯು.ಬಿ. ಕಟ್ಟಡ, ಪರವಾನಗಿ ಶುಲ್ಕ ಪರಿಷ್ಕರಿಸಿರುವ ಬಗ್ಗೆ ಪ್ರಕರಣ ಬಾಕಿ ಇರುತ್ತದೆ.

... 7

ಓ.ಎಸ್.ನಂ. 309/2013, ವಿಜಯ ಬ್ಯಾಂಕ್, ಮಳಿಗೆ ನಂ. 14 ಮತ್ತು 15, ನೆಲ ಮಹಡಿ, ಪಿ.ಯು.ಬಿ. ಕಟ್ಟಡ, ಪರವಾನಗಿ ಶುಲ್ಕ ಪರಿಷ್ಕರಿಸಿರುವ ಬಗ್ಗೆ ಪ್ರಕರಣ ಬಾಕಿ ಇರುತ್ತದೆ.

ಡಬ್ಲ್ಯೂಪಿ.ನಂ. 24146/2013, ಪೋಸ್ಟ್ ಆಫೀಸ್, ಮಳಿಗೆ ನಂ.17, ನೆಲ ಮಹಡಿ, ಪಿ.ಯು.ಬಿ.ಕಟ್ಟಡ, ಪರವಾನಗಿ ಶುಲ್ಕ ಪರಿಷ್ಕರಿಸಿರುವ ಬಗ್ಗೆ ಪ್ರಕರಣ ಬಾಕಿ ಇರುತ್ತದೆ.

ಡಬ್ಲ್ಯೂಪಿ.ನಂ. 14981/2013, ಶಂಕರ್‌ನಾಗ್ ಚಿತ್ರಮಂದಿರ, 2ನೇ ಮಹಡಿ, ಪಿ.ಯು.ಬಿ.ಕಟ್ಟಡ, ಬಾಕಿ ಪರವಾನಗಿ ಶುಲ್ಕ ವಸೂಲಾತಿ ಬಗ್ಗೆ ಪ್ರಕರಣ ಬಾಕಿ ಇರುತ್ತದೆ.

**ಪಶ್ಚಿಮ ವಲಯ ಮಾರುಕಟ್ಟೆಗಳ ಪ್ರಕರಣಗಳು:**

ಓ.ಎಸ್. ನಂ. 3766/2009, ಶ್ರೀ.ಸೈಯದ್ ನೂರ್, ಮಾಲಿಗೆ ಸಂಖ್ಯೆ:1260, ಗುಂಡೋಪಂತ್ ರಸ್ತೆ, ಓ.ಎಸ್. ನಂ. 7401/2010, ಶ್ರೀ.ಹೆಚ್.ಸಿ. ರಾಮಣ್ಣ, ಮಳಿಗೆ ಸಂಖ್ಯೆ:04, ಅಪ್ಪರ್ ಬೇಸ್‌ಮೆಂಟ್, ಕೆ.ಆರ್.ಮಾರುಕಟ್ಟೆ, ಓ.ಎಸ್. ನಂ.3419/2011, ಶ್ರೀ. ತೇಜಸ್, ಮಳಿಗೆ ನಂ. 361/ಎ, ಕೆ.ಆರ್. ಮಾರುಕಟ್ಟೆ, ಓ.ಎಸ್. ನಂ.3420/2011, ಶ್ರೀ. ಶ್ರೀರಾಮ್, ಮಳಿಗೆ ನಂ. 361ಎ, ಕೆ.ಆರ್. ಮಾರುಕಟ್ಟೆ, ಓ.ಎಸ್.ನಂ.3421/2011, ಶ್ರೀ. ಮಂಜುನಾಥ್, ಮಳಿಗೆ ಸಂಖ್ಯೆ:361/ಎ, ಕೆ.ಆರ್. ಮಾರುಕಟ್ಟೆ, ಓ.ಎಸ್.ನಂ.3417/2011, ಶ್ರೀ, ಖಾದರ್‌ಪಾಷ, ಮಳಿಗೆ ನಂ.361/ಎ, ಕೆ.ಆರ. ಮಾರುಕಟ್ಟೆ, ಓ.ಎಸ್.ನಂ.3418/2011, ಶ್ರೀ. ಲಕ್ಷ್ಮೀನಾರಾಯಣ, ಮಳಿಗೆ ಸಂಖ್ಯೆ: 333/ಬಿ, ಎಸ್.ಕೆ.ಆರ್. ಮಾರುಕಟ್ಟೆ, ಅಪ್ಪರ್‌ಬೇಸ್‌ಮೆಂಟ್, ಓ.ಎಸ್.ನಂ.25244/2011, ಶ್ರೀ. ವೆಂಕಟೇಶ್, ಮಳಿಗೆ ನಂ. 59, (ಹಳೆ ನಂ. 310), ಗುಂಡೋಪಂತ್ ರಸ್ತೆ, ಸಿಟಿ ಮಾರ್ಕೆಟ್, ಡಬ್ಲ್ಯೂ.ಪಿ.ನಂ.29998/2013, ಶ್ರೀ. ಎಸ್. ಭಾವಿ ಮತ್ತು ಇತರರು, ಮಳಿಗೆ ಸಂಖ್ಯೆ: ಬಿ–68 ಮತ್ತು ಬಿ–9, ಡಬ್ಲ್ಯೂ.ಪಿ.ನಂ.25488/25493/2013, ಶ್ರೀ. ಎಂ.ಎಸ್. ರಾಜೇಂದ್ರ ಕುಮಾರ್, ಮಳಿಗೆ ಸಂಖ್ಯೆ:;133,137,ಬಿ–1,123,116 ಮತ್ತು ಬಿ–8 ಅಪ್ಪರ್‌ಬೇಸ್‌ಮೆಂಟ್, ಡಬ್ಲ್ಯೂ.ಪಿ.ನಂ.24076179/2013, ಫ್ಲವರ್ ಮರ್ಚೆಂಟ್ ಅಸೋಸಿಯೇಷನ್, ಡಬ್ಲ್ಯೂ.ಪಿ.ನಂ.13511/2012, ಟಿ. ರಾಮಕೃಷ್ಣ, ನಂ. ಬಿ/1, ಅಪ್ಪರ್‌ಬೇಸ್‌ಮೆಂಟ್, ಎಸ್.ಕೆ.ಆರ್. ಮಾರುಕಟ್ಟೆ, ಡಬ್ಲ್ಯೂ.ಪಿ.ನಂ.38163/2013, ಬಿ. ಸ್ಕಂದ್ರ ಕುಮಾರ್, ನಂ. 1, ಪಶ್ಚಿಮ ವಿಂಗ್(ಡಾರ್ಕ್ ರೂಂ.)ಎಸ್.ಆರ್.ಕೆ. ಮಾರುಕಟ್ಟೆ, ಆರ್.ಎಫ್.ಎ.ನಂ. 1358/13/2013, ಸಿರ್‌ಜ್ ಅಹಮದ್ ಮತ್ತು ಇತರರು, ನಂ. 1 ರಿಂದ 7, ನೆಲಅಂತಸ್ತು, ಎಸ್.ಕೆ.ಆರ್. ಮಾರುಕಟ್ಟೆ, ಓ.ಎಸ್. ನಂ. 17748/05, ಮೆ. ಶೀನಿವಾಸ್ ಎಂಟರ್‌ಪ್ರೈಸಸ್, ಹೋಟೆಲ್ ಶಿವ ಇಂಟರ್ ನ್ಯಾಷಿನಲ್ ಕಾರ್ಪೂರೇಷನ್ ಷಾಪಿಂಗ್ ಕಾಂಪ್ಲೆಕ್ಸ್, ಟ್ಯಾಂಕ್ ಬಂಡ್ ರಸ್ತೆ, ಸುಭಾಷ್ ನಗರ, ಓ.ಎಸ್. ನಂ. 1331/13, ಆಯುಕ್ತರು, ಕದಂಬ ರಸ್ಟೋರೆಂಟ್, ಓ.ಎಸ್.ನಂ. 26306/13, ಸೈಯದ್ದ ಜಬೀವುಲ್ಲಾ, ಎಂಟರನ್ಸ್ ಫೀ ವಸೂಲಿ, ಎಸ್.ಕೆ.ಆರ್. ಮಾರುಕಟ್ಟೆ (ಟೆಂಡರ್), ಇವುಗಳ ಪ್ರಕರಣಗಳು ಬಾಕಿ ಇರುತ್ತವೆ.

**ದಕ್ಷಿಣ ವಲಯ ಮಾರುಕಟ್ಟೆಗಳ ಪ್ರಕರಣಗಳು:**

ಜಯನಗರ ವಾಣಿಜ್ಯ ಸಂಕೀರ್ಣದ ಆವರಣದಲ್ಲಿ ಮಿಸ್/558/02, ಸಿ.ಆರ್.ಪಿ/257/2010, ಶ್ರೀ. ಕೆ. ಪ್ರಭಾಕರ್ ರಾವ್, ಮಹಾರಾಜ ಕೋಲ್ಡ್ ಸ್ಟೋರೇಜ್, ಮಳಿಗೆ ಸಂಖ್ಯೆ: ಡಬ್ಲ್ಯೂಎಸ್‌ವೈ. 13 ಮತ್ತು 14, ಓ.ಎಸ್. 8333/02, ಬಿ.ಸಿ.ಸತ್ಯಮೂರ್ತಿ, ಮಳಿಗೆ ಸಂಖ್ಯೆ: 15ಬಿ, ಓ.ಎಸ್. 15322/01, ಓ.ಎಸ್. 15447/06, ಓ.ಎಸ್. 15939/06, ಅಬ್ದುಲ್ ಜಮೀಲ್ ಬಿ.ಜಿ.ಎಫ್. 17, ಎಂ.ಎ. 32/03, ಬಿ.ನಂಜಪ್ಪ, ನಂ. 37,38, ಎಂ.ಎ. 30/03, ಜೆ.ಸಿ.ವೆಂಕಟಲಕ್ಷ್ಮಯ್ಯ, ನಂ.41, 42, ಡಬ್ಲ್ಯೂಪಿ.1147/08, ಡಬ್ಲ್ಯೂಪಿ.222/06, ಮೈಸ್ಪಿನ್ನಿಂಗ್ ನ್ಯಾಷನಲ್ ಟೆಕ್ಸ್‌ಟೈಲ್ ಕಾರ್ಪೋರೇಷನ್ ಇಬಿಎಫ್‌ಎಫ್03, ಇವುಗಳ ಪ್ರಕರಣಗಳು ಬಾಕಿ ಇರುತ್ತವೆ.

ಸಭೆಯಲ್ಲಿ ಹಾಜರಿದ್ದ ಕಾನೂನು ಕೋಶದ, ಅಧಿಕಾರಿಗಳಿಗೆ ಬಾಕಿ ಇರುವ ಪ್ರಕರಣಗಳ ಕುರಿತು ವಿಚಾರಿಸಲಾಗಿ, ಕೆಲವು ಪ್ರಕರಣಗಳು ಮಳಿಗೆಗಳ ಪರವಾನಗಿ ಶುಲ್ಕದ ಪರಿಷ್ಕರಣೆ ವಿರುದ್ಧ ಹೂಡಿರುವ ದಾವೆಗಳಾಗಿದ್ದು, ಕೆಲವು ಅಂತಿಮ ಘಟ್ಟದಲ್ಲಿರುತ್ತವೆ. ಕೆಲವು ಪ್ರಕರಣಗಳು ಹಂಚಿಕೆಯ ಬಗ್ಗೆ ವಿರುದ್ಧವಾಗಿ ಹೂಡಿದ್ದು, ಇವುಗಳ ಪ್ರಕರಣಗಳು ನಡೆಯುತ್ತಿವೆ. ಕೆಲವು ಯಥಾಸ್ಥಿತಿ ಕಾಪಾಡುವಂತೆ ಘನ ನ್ಯಾಯಾಲಯದ ಆದೇಶವಾಗಿರುತ್ತದೆ ಎಂದು ಸಮಿತಿಯ ಗಮನಕ್ಕೆ ತಂದಿರುತ್ತಾರೆ.

ಈ ಅಂಶಗಳನ್ನು ಗಮನಿಸಿದ ಸಮಿತಿಯು ಪ್ರಕರಣಗಳು ಬಹಳ ಹಳೆಯದಾಗಿದ್ದು, ಇವುಗಳನ್ನು ತ್ವರಿತವಾಗಿ
ಮುಗಿಸುವಂತೆ ಅಗತ್ಯ ಕ್ರಮಕೈಗೊಳ್ಳಲು ಪಾಲಿಕೆಯ ಪರ ವಕೀಲರಿಗೆ ಪತ್ರವನ್ನು ಬರೆದು ಅಗ್ಗಾಗ್ಗೆ ಪಾಲಿಕೆಯ

...

8

ಕಾನೂನು ಅಧಿಕಾರಿಗಳು ಈ ಬಗ್ಗೆ ವಿಚಾರಿಸುತ್ತಿರಬೇಕೆಂದು ಹಾಗೂ ಪಾಲಿಕೆಯ ಅರ್ಥಿಕ ಹಿತದೃಷ್ಟಿಯಿಂದ ಬಾಕಿ ಇರುವ ಪ್ರಕರಣಗಳನ್ನು ಮುಕ್ತಾಯಗೊಳಿಸುವಲ್ಲಿ ಖುದ್ದು ಕಾಳಜಿ ವಹಿಸಿ, ಕ್ರಮ ವಹಿಸಲು ಸಮಿತಿಯು ಸೂಚಿಸಿತು.

ಕೆಲವು ಪ್ರಕರಣಗಳು ಇತ್ಯರ್ಥವಾಗಿ ಘನ ನ್ಯಾಯಾಲಯಗಳಿಂದ ಆದೇಶವಾಗಿದ್ದರೂ ಸಹ ಅದರಂತೆ ಪಾಲಿಕೆಯಲ್ಲಿ ಸಂಬಂಧಪಟ್ಟ ಅಧಿಕಾರಿಗಳು ಕ್ರಮವಹಿಸಿದೇ ಇರುವುದು ಸಮಿತಿಯ ಗಮನಕ್ಕೆ ಬಂದಿದ್ದು, ಈ ಬಗ್ಗೆ ಉಪ ಆಯುಕ್ತರು (ಮಾರುಕಟ್ಟೆ) ರವರು ಹಾಗೂ ಕಂದಾಯಾಧಿಕಾರಿ (ಮಾರುಕಟ್ಟೆ) ರವರು ಖುದ್ದು ಗಮನಹರಿಸಿ, ಅಗತ್ಯ ಕ್ರಮ ಕೈಗೊಳ್ಳುವಂತೆ ಅಧ್ಯಕ್ಷರು ಸೂಚಿಸಿದರು.

ಕೆಲವು ಮಳಿಗೆಗಳು ಹಾಗೂ ಸರ್ಕಾರಿ ಕಛೇರಿಗಳಿಂದಲೂ ಬಾಕಿ ಪರವಾನಗಿ ಶುಲ್ಕ ಬಾಕಿ ಇದ್ದು, ಇವುಗಳಿಗೆ ಕಾನೂನು ರೀತ್ಯಾ ನೋಟೀಸ್‌ಗಳನ್ನು ಜಾರಿ ಮಾಡಲು ಸಂಬಂಧಪಟ್ಟ ಸಹ ಕಂದಾಯಾಧಿಕಾರಿಗಳಿಗೆ ಹಾಗೂ ಕಂದಾಯಾಧಿಕಾರಿಗೆ ಸೂಚಿಸಲಾಗಿದ್ದು, ಇವುಗಳ ಹಂಚಿಕೆದಾರರು ಈ ಬಗ್ಗೆ ಸಕಾರಾತ್ಮಕ ಪ್ರತಿಕ್ರಿಯೆಯನ್ನು ನೀಡದಿದ್ದಲ್ಲಿ ನಿಯಮಾವಳಿಗಳ ರೀತ್ಯಾ ಪಾಲಿಕೆಯ ವಶಕ್ಕೆ ತೆಗೆದುಕೊಳ್ಳಲು ಕಾನೂನು ವಿಷಯಗಳಲ್ಲಿ ಸಹಕರಿಸಲು ಕೆವಿಯಟ್ ಸಲ್ಲಿಸುವ ಬಗ್ಗೆ ಕ್ರಮವಹಿಸಲು ಕಾನೂನು ಅಧಿಕಾರಿಗಳಿಗೆ ಸಮಿತಿಯು ಸೂಚಿಸಿತು. ಈ ನಿಟ್ಟಿನಲ್ಲಿ ಉಪ ಆಯುಕ್ತರು (ಮಾರುಕಟ್ಟೆ)ರವರು ಖುದ್ದು ಕಾಳಜಿ ವಹಿಸಿ, ಪ್ರಕರಣಗಳು ಮುಗಿಯುವಂತೆ ಕ್ರಮವಹಿಸಲು ಸೂಚಿಸಲಾಯಿತು.

ಸಹಿ/-

( ವೈ.ಆರ್. ಗೌರಮ್ಮ )
ಅಧ್ಯಕ್ಷರು
ಮಾರುಕಟ್ಟೆ ಸ್ಥಾಯಿ ಸಮಿತಿ.